ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ ''೧೯೮೮ರ ಕರ್ನಾಟಕ ಮನರಂಜನಾ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ೧೯೮೮ರ ಕರ್ನಾಟಕ ಮನರಂಜನಾ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ *

೧೯೮೮ರ ಕರ್ನಾಟಕ ಕೃಷಿ ವರಮಾನ ತೆರಿಗೆ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ''೧೯೮೮ರ ಕರ್ನಾಟಕ ಕೃಷಿ ವರಮಾನ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.''

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್.—ಇದರಲ್ಲಿ ವರ್ಷದ ಬದಲಾವಣೆ ಆಗಬೇಕೆಂಬ ಸೂಚನೆ ಮುಖ್ಯವಾದದ್ದು. ಇದನ್ನು ಮಾನ್ಯ ಮುಖ್ಯ ಮಂತ್ರಿಯವರು ತಮ್ಮ ಆಯವ್ಯಯವನ್ನು ಸಭೆಯ ಮುಂದೆ ಮಂಡಿಸುವಾಗ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಇದರಲ್ಲಿ ಹೊಸ ವಿಚಾರವೇನೂ ಇಲ್ಲ ಈ ಒಂದು ತಿದ್ದುಪಡಿ ಮುಂದಿನ ವರ್ಷ ಅಂದರೆ ೧೯೮೯ನೇ ಇಸವಿಯಿಂದ ಜಾರಿಗೆ ಬರುತ್ತದೆ. ಏಪ್ರಿಲ್ ಒಂದರಿಂದ ವಿತ್ತೀಯ ವರ್ಷ ಪ್ರಾರಂಭವಾಗಬೇಕೆಂಬುದೇ ಇದರಲ್ಲಿ ಸೂಚಿಸಿರತಕ್ಕ ಬದಲಾವಣೆ. ಇದಕ್ಕೆ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ ೧೯೮೮ರ ಕರ್ನಾಟಕ ಕೃಷಿ ವರಮಾನ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

೨ನೇ ಖಂಡ

ಅಧ್ಯಕ್ಷರು.—ಖಂಡ ೨ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ಮೊದಲನೇ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತವೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

---

* ANNEXURE

ಮೊದಲನೇ ಖಂಡ, ಹೆಸರು ಮತ್ತು ಆವತರಣಿಕೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—''೧೯೮೦ರ ಕರ್ನಾಟಕ ಕೃಷಿ ವರಮಾನ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ೧೯೮೦ ರ ಕರ್ನಾಟಕ ಕೃಷಿ ವರಮಾನ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಸೂದೆಗೆ ಒಪ್ಪಿಗೆ ನೀಡಲಾಯಿತು

೧೦–೦೦ ಪಿ. ಎಂ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಪೂರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ನಂತರ ತೆಗೆದುಕೊಳ್ಳೋಣ. ಈಗ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ದಯವಿಟ್ಟು ತೆಗೆದುಕೊಳ್ಳಿ.

೧೯೮೮ನೇ ಇಸವಿಯ ಕರ್ನಾಟಕ ಮನರಂಜನೆ ತೆರಿಗೆ (೨ನೇ ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ''೧೯೮೮ನೇ ಇಸವಿಯ ಕರ್ನಾಟಕ ಮನರಂಜನೆ ತೆರಿಗೆ (೨ನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.''

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, under Statement of Objects and Reasons this is what is stated by way of explanation,

''While a film in Kannada, Kodava, Konkani or Tulu language has to secure a "best feature film award" for exemption from payment of entertainments tax, a film in any other language has to secure only "an award" for exemption from payment of Entertainments Tax. It is proposed to set right the anomaly in the condition necessary for grant of exemption from payment of entertainments tax by requiring films in other languages also to secure "a best feature film award" for grant of exemption from payment of Entertainments Tax.''

ಅದಕ್ಕೋಸ್ಕರ ಇದನ್ನು ಮಾಡಿದ್ದೇವೆ. ಪರಿಸಮಾನವಾಗಿ ಅವರಿಗೆ ಅನುಕೂಲವಾಗಲಿ ಎಂದು ಮಾಡಿದ್ದೇವೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದನ್ನು ಆಧರಿಸಿ ಈ ತಿದ್ದುಪಡಿಯನ್ನು ತಂದಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಷೋ ಟ್ಯಾಕ್ಸ್ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ಷೋ ಟ್ಯಾಕ್ಸ್‌ನಲ್ಲಿ ಏನೂ ಬದಲಾವಣೆ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದೆ ನೋಡಿ.